Sri K. S. VASAN.—In answer to question 44 (*b*), the Minister has stated 'No'. I want to know whether the concerned Minister reads the daily papers and the editorials on the subject?

Sri T. CHANNIAH.—It is not necessary to read all the papers.

Introduction of Piece-work system in Road Works.

Q.—20. **Sri T. HANUMIAH** (Hiriyur—Scheduled Castes).—

Will the Government be pleased to state:—

whether it will not be practicable to introduce the piece-work system of execution of works of roads, etc., in the Public Works Department and Local Bodies?

A.—**Sri Kadidal MANJAPPA** (Minister for Revenue and Public Works).—The piece-work System is already in vogue.

ಶ್ರೀ ಟಿ. ಹನುಮಯ್ಯ.—ಕೆಲಸಕ್ಕೆ ತಕ್ಕಷ್ಟು ಕೂಲಿ ಕೊಡುವ ಪದ್ಧತಿ ಜಾರಿಯಲ್ಲಿದೆಯೆಂದು ಉತ್ತರದಲ್ಲಿ ಹೇಳಿದೆ. ಕೂಲಿ ಕೊಡುವುದಿಲ್ಲವೆಂದು ನಾನು ಹೇಳಿಲ್ಲ. ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಏಳು ಎಂಟು ಮೈಲಿ ರಸ್ತೆ ಕೊಡುವುದಕ್ಕೆ ಬದಲಾಗಿ ಒಂದೆರಡು ಮೈಲಿಯಷ್ಟನ್ನು ಪೀಸ್‌ವರ್ಕ್ ಪದ್ಧತಿವೇರೆ ಕೊಡುತ್ತೀರಾ ಎಂದು ನಾನು ಕೇಳಿರುವುದು.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹಾಗೆ ಸ್ಪಷ್ಟವಾಗಿ ಕೇಳಿಲ್ಲ.

ಶ್ರೀ ಟಿ. ಹನುಮಯ್ಯ.—ಪೀಸ್‌ವರ್ಕ್ ಮಾಡತಕ್ಕು ದೆಂದರೆ ಕೂಲಿ ಕೊಡತಕ್ಕದೆಂದು ಅರ್ಥವೇನು? ಹೋಗಲಿ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಹಾಗೆ ಕೊಟ್ಟಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳನ್ನು ಈಗ ಕೊಡುವುದಕ್ಕಾಗುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಕಟ್ಟಡಗಳು ಮತ್ತು ರಸ್ತೆ ರಿಪೇರಿ ಎರಡರಲ್ಲಿಯೂ ಪೀಸ್‌ವರ್ಕ್ ಪದ್ಧತಿಯಿದೆಯೆ? ಹಾಗಿದ್ದರೆ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲ ಕಡೆಯೂ ಇದೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಮೇಜರ್ ಕೆರೆಗಳ ವಿಚಾರದಲ್ಲಿಯೂ ಅನ್ವಯಿಸುತ್ತದೆಯೆ ಈ ಪೀಸ್‌ವರ್ಕ್ ಪದ್ಧತಿ?

ಶ್ರೀ ಕಡಿದಾಳ್‌ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ.

ಶ್ರೀ ವಿ. ಮಸಿಯಪ್ಪ.—ಪೀಸ್‌ವರ್ಕ್ ಕೆಲಸವನ್ನು ಮಾಡತಕ್ಕ ವ್ಯಕ್ತಿಗಳಾರು?

Mr. SPEAKER.—The Minister need not answer it.

12-30 P.M.

ಶ್ರೀ ವಿ. ಮಸಿಯಪ್ಪ.—ಈ ಪೀಸ್‌ವರ್ಕ್ಸ್ ಕೆಲಸಗಳನ್ನು ಮಾಡಿನತಕ್ಕ ವ್ಯಕ್ತಿಗಳು ಯಾರು?

Mr. SPEAKER.—The Hon'ble Minister need not answer.

Abolition of Inam, Jodi and Kayamgutta villages in the State.

Q. 93.—**Sri G. NARAYANA GOWDA** (Mulbagal-Srinivaspur).—Will the Government be pleased to state:

whether they intend taking immediate steps to abolish Inam, Jodi and Kayamgutta villages in the State?

A.—**Sri Kadidal MANJAPPA** (Minister for Revenue and Public Works)—The matter is under active consideration and if possible a Bill in the matter will be introduced during the present Session.

ಶ್ರೀ ಜಿ. ನಾರಾಯಣಗೌಡ.—ಸಂಸ್ಥಾನದಲ್ಲಿರತಕ್ಕ ಇನಾಂ, ಜೋಡಿ ಮತ್ತು ಖಾಯಂಗುತ್ತಗಳನ್ನು ರದ್ದು ಪಡಿಸಬೇಕೆಂಬ ಬಗ್ಗೆ ಈ ಸಭೆಯು ಮುಂದೆ ಹಿಂದೆ ಒಂದು ಮಸೂದೆಯನ್ನು ತಂದಿರಲಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ಮಸೂದೆ ಬಂದಿದ್ದುದು ಈ ಸಭೆಯಮುಂದೆ ಅಲ್ಲ. ಹಿಂದೆ ಇದ್ದಂಥ ಪ್ರಜಾಪ್ರತಿನಿಧಿ ಸಭೆಯ ಮುಂದೆ ಬಂದಿತ್ತು.

ಶ್ರೀ ಜಿ. ನಾರಾಯಣಗೌಡ.—ಆಗ ಅದನ್ನು ಸೆಲೆಕ್ಟ್ ಸಮಿತಿಯವರ ಪರ್ಯಾಲೋಚನೆಗೆ ಒಪ್ಪಿಸಿರಲಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಒಪ್ಪಿಸಲಾಗಿತ್ತು.

ಶ್ರೀ ಜಿ. ನಾರಾಯಣಗೌಡ.—ಅನಂತರ ಅದರ ಪರಿಣಾಮವೇನಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಆರ್. ಎ. ಸಭೆಯು ರದ್ದಾದ ಪ್ರಯುಕ್ತ ಅದೆಲ್ಲವೂ ಲ್ಯಾಪ್ಸ್ ಆಗಿ ಹೋಯಿತು.

ಶ್ರೀ ಜಿ. ನಾರಾಯಣಗೌಡ.—ಪುನಃ ಹೊಸದಾಗಿ ಆ ಮಸೂದೆಯನ್ನು ಈ ಸಭೆಯಮುಂದೆ ತರತಕ್ಕ ಸಂದರ್ಭವಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ನದ್ಯದಲ್ಲೇ ಈ ಸಭೆಯಮುಂದೆ ಅದು ಬರಲಿರುತ್ತದೆ.

Mr. SPEAKER.—There is the answer. Besides, it was answered yesterday.

ಶ್ರೀ ಎಸ್. ಗೋಪಾಲಗೌಡ.—ಅದರಲ್ಲಿ ಹರಿಜನರುಗಳನ್ನೂ ಸೇರಿಸಲಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಸೇರಿಸಲಾಗಿದೆ.